Karnataka Veterinary, Animal & Fisheries Sciences University, Bidar
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಡೀನ್‌ರವರ ಕಾರ್ಯಾಲಯ
ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

Office of the Dean
Veterinary College, BIDAR

ಸಂಖ್ಯೆ ಡೀನ್/ಪವೈಮ(ಬೀ)/ಬೊ.ಗು.ನೇ/ಪ್ರಕಟಣೆ/2024-25

ದಿನಾಂಕ 17-12-2024

Veterinary College, BIDAR
Sl. No: 1120A Date: 17/12/24

## ಪ್ರಕಟಣೆ

**ವಿಷಯ:** ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭೋಧಕರನ್ನು ನೇಮಕಾತಿ ಮಾಡುವ ಕುರಿತು

**ಉಲ್ಲೇಖ:** 1) File No. RGR-EST0GEN/14/2023-ESTD-O/oDR/1/51896/2024 Dt 17-12-2024
2) No.R/Rectt/104th BOM/Dir.RecTeacher.ScoreCard/2022/2697 Dtd 08-09-2022

◇◇◇

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ. ಗುತ್ತಿಗೆ ನೇಮಕಾತಿ ಬಯಸುವ ಅಭ್ಯರ್ಥಿಗಳು <u>**ದಿನಾಂಕ 20-12-2024 ರಂದು ಬೆಳಗ್ಗೆ 10.00 ಗಂಟೆಗೆ**</u> ನಿಗದಿತ ನಮೂನೆಯೊಂದಿಗೆ ಸಂದರ್ಶನಕ್ಕೆ ಹಾಜರಾಗಲು ತಿಳಿಸಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಅಂಗರಚನಾಶಾಸ್ತ್ರ<br>Veterinary Anatomy | 01 |
| 2 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ರೋಗಶಾಸ್ತ್ರ<br>Veterinary Pathology | 01 |
| 3 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಪಶುಸಂಗೋಪನೆ ವಿಸ್ತರಣಾ ಶಿಕ್ಷಣ<br>Veterinary Animal Husandry Ext. Educaiton | 01 |
| 4 | ಸಹಾಯಕ ಪ್ರಾಧ್ಯಾಪಕರು<br>Assistant Professor | ಜಾನುವಾರು ಸಾಕಾಣಿಕ ಸಂಕೀರ್ಣ Livestock Farm Complex<br>(Veterinary Gyneacology Obstetrics) | 01 |
| 5 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ<br>Veterinary Gyneacology Obstetrics | 01 |
| 6 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಸೂಕ್ಷ್ಮಜೀವಾಣುಶಾಸ್ತ್ರ<br>Veterinary Microbiology | 01 |
| 7 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ Veterinary Clinical Complex<br>(ಪಶುವೈದ್ಯಕೀಯ ರೋಗಶಾಸ್ತ್ರ Veterinary Pathology) | 01 |
| 8 | ಸಹಾಯಕ ಪ್ರಾಧ್ಯಾಪಕರು<br>Assistant Professor | ದೈಹಿಕ ಶಿಕ್ಷಣ<br>Physical Education | 01 |

<u>ವಿದ್ಯಾರ್ಹತೆ:</u>

- ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯಾರ್ಥಿಗಳನ್ನು ನೇಮಕಾತಿ ನಿಯಮಾವಳಿಯಂತೆ, ಮಾರ್ಗಸೂಚಿ ಅನುಗುಣವಾಗಿ ಮತ್ತು ಕಾರ್ಯವಿಧಾನಗಳ ಪ್ರಕಾರ ಭೋಧಕ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.
- ಸಂಬಂಧಪಟ್ಟ ವಿಷಯದಲ್ಲಿ ಭಾರತೀಯ ಪಶುವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಹೊಂದಿರುವ ಮಹಾವಿದ್ಯಾಲಯಗಳಿಂದ ಪಶುವೈದ್ಯಕೀಯ ಅಥವಾ ಭಾರತೀಯ ಕೃಷಿ ಅನುಸಾಂಧ ಪರಿಷತ್ತಿನ ಅಡಿಯಲ್ಲಿ ಬರುವ Deemed Institutions ಗಳಿಂದ BVSc&AH ಪದವಿ ಪಡೆದಿರಬೇಕು
- ಸಂಬಂಧಪಟ್ಟ ವಿಷಯದಲ್ಲಿ ಎಂವ್ಹಿಎಸ್‌ಸಿ (MVSc) ಅಥವಾ ಪಿಎಚ್‌ಡಿ (Ph.D) ಪಡೆದಿರಬೇಕು
- ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (NET) ಉತ್ತೀರ್ಣರಾದವರಿಗೆ ಮೊದಲ ಆದ್ಯತೆ ನೀಡಲಾಗುವುದು.

**ಷರತ್ತು ಮತ್ತು ನಿಬಂಧನೆಗಳು:**

- ❖ ಪಿಎಚ್‌ಡಿ ಪದವಿ/ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಉತ್ತೀರ್ಣರಾಗಿ ಪ್ರಮಾಣಪತ್ರ ಹೊಂದಿರುವ ಅಭ್ಯರ್ಥಿಗಳಿಗೆ ಮಾಸಿಕ ರೂ. 56,700/- ಸಂಭಾವನೆ ನೀಡಲಾಗುವುದು ಹಾಗೂ ಪಿಎಚ್‌ಡಿ ಪದವಿ/ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಪ್ರಮಾಣ ಪತ್ರ ಹೊಂದಿರದ ಅಭ್ಯರ್ಥಿಗಳಿಗೆ ಮಾಸಿಕ **ರೂ. 50,000/-** ವೇತನ ಪಾವತಿಸಲಾಗುವುದು
- ❖ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಬಂದು ಸಂದರ್ಶನಕ್ಕೆ ಹಾಜರಾಗಬೇಕು
- ❖ ಅಭ್ಯರ್ಥಿಗಳು ಯಾವುದೇ ಸಂಧರ್ಭದಲ್ಲಿ ಅರ್ಜಿಗಳನ್ನು ಮುಂಚಿತವಾಗಿ ಅಥವಾ ಮಿಂಚಂಚೆ ಮೂಲಕ ಕಳುಹಿಸುವಂತಿಲ್ಲ
- ❖ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಪ್ರಸ್ತುತ ಖಾಲಿ ಇರುವ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಖಾಯಂಮಾತಿ, ಹಿರಿತನ, ಸಕ್ರಮಾತಿ, ಪಿ.ಎಫ್/ಇ.ಎಸ್.ಐ ಮತ್ತು ಇತರೆ ಯಾವುದೇ ತರಹದ ಸೌಲಭ್ಯ ಅಥವಾ ಹಕ್ಕಿಗೆ ಒಳಪಟ್ಟಿರುವುದಿಲ್ಲ
- ❖ ಸದರಿ ಅಧಿಸೂಚನೆಯು ತಾತ್ಕಾಲಿಕ ನೇಮಕಾತಿಯಾಗಿದ್ದು, ಯಾವುದೇ ಸಮಯದಲ್ಲಿ ಯಾವುದೇ ಮಾಹಿತಿ ನೀಡದೆ ಕೆಲಸದಿಂದ ಬಿಡುಗಡೆ ಮಾಡಬಹುದು ಅಥವಾ ಅವಧಿಯ ಮುಂಚಿತವಾಗಿ ಆದೇಶ ರದ್ದು ಮಾಡಬಹುದಾಗಿದೆ.
- ❖ ಪ್ರಸ್ತುತ ಸಹಾಯಕ ಪ್ರಾಧ್ಯಾಪಕ ಹುದ್ದೆಗಳು 179 ದಿನಗಳ ಅವಧಿಗೆ ಮಾತ್ರ ಅಥವಾ ಖಾಯಂ ಭೋಧಕ ಸಿಬ್ಬಂದಿಗಳ ಭರ್ತಿ ಆಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.
- ❖ ಕಲ್ಯಾಣ ಕರ್ನಾಟಕ ಅಥವಾ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು

ಡೀನ್(ಪವೈ)
ಡೀನ್ (ಪ.ವೈ.)
ಪಶು ವೈದ್ಯಕೀಯ ಮಹಾವಿದ್ಯಾಲಯ
ಬೀದರ - 585226

**ಪ್ರ.ಆ:**

1. ಮಾನ್ಯ ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಶಿವಮೊಗ್ಗ/ಹಾಸನ/ಗದಗ ಇವರ ಮಾಹಿತಿಗಾಗಿ ಹಾಗೂ ತಮ್ಮ ಮಹಾವಿದ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ
2. ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಇವರ ಮಾಹಿತಿಗಾಗಿ ಸದರಿ ಪ್ರಕಟಣೆಯನ್ನು ವ್ಯಾಪಕವಾಗಿ ಪ್ರಚುರ ಪಡಿಸಲು ಮಾಹಿತಿಸಿದೆ
3. ಹಿರಿಯ ಆಪ್ತ ಕಾರ್ಯದರ್ಶಿಗಳು ಗ್ರೇಡ್-1, ಮಾನ್ಯ ಕುಲಪತಿಗಳ ಕಛೇರಿ, ಕಪಪಂಮೀವಿವಿ, ಬೀದರ ಮಾಹಿತಿಗಾಗಿ ಮತ್ತು ಮಾನ್ಯ ಕುಲಪತಿಗಳ ಗಮನಕ್ಕೆ ತರಲು ಕೋರಿದೆ.